OS No. 11/2024

DW-2

**(ಇಂದು ದಿಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.TVP ವಕೀಲರಿಂದಃ-**

5 ನೇ ಪ್ರತಿವಾದಿ ನನ್ನ ಗೆಳೆಯ. ನನಗೆ 5 ನೇ ಪ್ರತಿವಾದಿಯ ಮುತ್ಯಾ ಮತ್ತು ಅವರ ಮನೆತನದ ಬಗ್ಗೆ ಗೊತ್ತಿಲ್ಲ. ಅವರ ಕುಟುಂಬಕ್ಕೆ ಏನು ಆಸ್ತಿ ಇದೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಅಜ್ಜಿ ನಾಗಮಣಿ ಜಮೀನು ಖರೀದಿ ಮಾಡುವಾಗ ನಾನು ಇರಲಿಲ್ಲ. ಮಾರಾಟ ಮಾಡಿವರ ಹೆಸರು ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಅಜ್ಜಿ ನಾನು ನನ್ನ ತವರು ಮನೆಯವರು ಕೊಟ್ಟ ಹಣದಿಂದ ಆಸ್ತಿ ಖರೀದಿ ಮಾಡಿದ್ದೇನೆ ಎಂದು ನನಗೆ ಹೇಳಿದ್ದರು. ಯಾವ ಕಾರಣಕ್ಕೆ ಅವರು ಸದರಿ ಸಂಗತಿಯನ್ನು ನನಗೆ ಹೇಳಿದರು ನನಗೆ ಗೊತ್ತಿಲ್ಲ. ನಾನು ಸೇಡಂ ನಿವಾಸಿ. ಚಿಂಚೋಳಿಯಲ್ಲಿರುವ ಸಿದ್ದ ಶ್ರೀ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ನಾಗಮಣಿಗೆ ಸಾಕಷ್ಟು ವಯಸ್ಸು ಆಗಿತ್ತು ಕಾರಣ ದಾನ ಪತ್ರ ಮಾಡಿಕೋಡುವಾಗ ಅವಳಿಗೆ ಏನು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾಗಮಣಿ ಆಸ್ತಿಯನ್ನು ತನ್ನ ತವರು ಮನೆ ಹಣದಿಂದ ಕೊಂಡಿರುವುದಾಗಿ ಹೇಳುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನಾಗಮಣಿಯ ಮಾಲೀಕತ್ವದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು , 1 ಮತ್ತು 5 ನೇ ಪ್ರತಿವಾದಿಯರು ಸೇರಿಕೊಂಡು ನಾಗಮಣಿಗೆ ಗೊತ್ತಾಗದ ಹಾಗೆ ದಾನ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾಗಮಣಿಗೆ ದಾನ ಪತ್ರದ ಬಗ್ಗೆ ಏನು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 5 ನೇ ಪ್ರತಿವಾದಿಯರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**